CW.1 PW.1

## ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ., ಕನಕಪುರ ರವರ ನ್ಯಾಯಾಲಯದಲ್ಲಿ

# CC No.344/2011

| | |
|---|---|
| ಸಾಕ್ಷಿದಾರರ ಹೆಸರು | ಶಿವಮಾದವಯ್ಯ |
| ತಂದೆಯ ಹೆಸರು | ಕರಿಪವಾಡಪ್ಪ |
| ವಯಸ್ಸು | 62 ವರ್ಷ |
| ವೃತ್ತಿ | ನಿವೃತ್ತ ಡಿವೈ ಎಸ್ ಪಿ |
| ವಿಳಾಸ | ಬೆಂಗಳೂರು |
| ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ | 20.05.2026 |

**<u>ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ-</u>**

ಆರೋಪಿಯನ್ನು ನಾನು ನೋಡಿರುತ್ತೇನೆ. ಈ ನ್ಯಾಯಾಲಯದಲ್ಲಿ ಹಾಜರಿರುತ್ತಾರೆ.

ನಾನು ಅಕ್ಟೋಬರ್ 2009 ರಿಂದ ಜೂನ್ 2011 ರವರೆಗೂ ರಾಮನಗರದ ಅಬಕಾರಿ ವಿಶೇಷ ಪೋಲೀಸ್ ಠಾಣೆಯಲ್ಲಿ ಪೋಲೀಸ್ ಇನ್ಸಪೆಕ್ಟರ್ ಆಗಿ ನನ್ನ ಕರ್ತವ್ಯವನ್ನು ನಿರ್ವಹಿಸುತ್ತಿದ್ದೇನೆ.

ದಿಃ 03.03.2012 ರಂದು ಸಿಬ್ಬಂದಿಗಳಾದ ಚಾಸಾ-2 ಮತ್ತು 3 ರವರನ್ನು ಕರೆದುಕೊಂಡು ನಮ್ಮ ಸರ್ಕಾರಿ ಜೀಪಿನಲ್ಲಿ ಕನಕಪುರದ ಕಡೆ ಗಸ್ತಿನಲ್ಲಿದ್ದಾಗ ನನಗೆ ಬಂದ ಖಚಿತ ಮಾಹಿತಿ ಮೇರೆಗೆ ಕುರುಬಹಳ್ಳಿ ಗ್ರಾಮಕ್ಕೆ ಭೇಟಿ ನೀಡಿ ಚಾಸಾ-4 ಮತ್ತು 5 ರವರನ್ನು ಪಂಚರನ್ನಾಗಿ ಬರಲು ಹೇಳಿ ಅವರಿಗೆ ವಿಚಾರವನ್ನು ತಿಳಿಸಿ ಸದರಿಯವರುಗಳು ಒಪ್ಪಿ ದ ಮೇರೆಗೆ ಅವರನ್ನು ಪಂಚರನ್ನಾಗಿ ಮಾಡಿ ಸದರಿಯವರುಗಳನ್ನು ಸ್ಥಳಕ್ಕೆ ಕರೆದುಕೊಂಡು ಹೋಗಿ ಆರೋಪಿಯ ಅಂಗಡಿಯ ಬಳಿ ಹೋದಾಗ ಸದರಿ ಅಸಾಮಿಯು ನಮ್ಮನ್ನು ನೋಡಿ ಓಡಿ ಹೋಗಿರುತ್ತಾನೆ. ಹಿಡಿಯಲು ಪ್ರಯತ್ನ ಮಾಡಿದಾಗ ಸಿಕ್ಕಿರುವುದಿಲ್ಲ.

ನಂತರ ಚಾಸಾ-4 ಮತ್ತು 5 ರವರ ಸಮಕ್ಷಮ ಸ್ಥಳವನ್ನು ಪರಿಶೀಲಿಸಿದಾಗ ಅಂಗಡಿಯಲ್ಲಿ ಒಂದು ಚೀಲದಲ್ಲಿ ಹೈವಾರ್ಡ ವಿಸ್ಕಿಯ 180 ಎಂ ಎಲ್ ನ 55 ಪೌಚ್ ಗಳು, ಓಲ್ಡ್ ಟವರೀನ್ 180 ಎಂ ಎಲ್ 5 ಪೌಚುಗಳು, ನಾಕ್ ಔಟ್ ಸ್ಟ್ರಾಂಗ್ ಬಿಯರ್ 330 ಎಂ ಎಲ್ ನ 6 ಟಿನ್ ಗಳು ಲಭ್ಯವಾಗಿರುತ್ತವೆ. ಅವುಗಳಲ್ಲಿ ತಲಾ ಒಂದನ್ನು ತೆಗೆದು ಬಿಳಿ ಬಟ್ಟೆಯಲ್ಲಿ ಸುತ್ತಿ ಸಿಕೆ ಎಂಬ ಷರಾ ಹಾಕಿ ರಾಸಾಯನಿಕ ಪರೀಕ್ಷೆಗೆ ಕಳುಹಿಸಲು ತಯಾರು ಮಾಡಿರುತ್ತೇವೆ.

ಸದರಿ ಮದ್ಯದ ಒಟ್ಟು ಮೊತ್ತ 2600/- ರೂಗಳು ಎಂದು ಪಂಚರು ಅಭಿಪ್ರಾಯ ಪಟ್ಟಿರುತ್ತಾರೆ. ಓಡಿ ಹೋದ ಅಸಾಮಿಯ ಬಗ್ಗೆ ವಿಚಾರ ಮಾಡಿದಾಗ ಆತನ ಹೆಸರು ಚೋಟಾ ಬಿನ್ ಮರಿಯಪ್ಪ ಎಂದು 38 ವರ್ಷ ಕುರುಬಹಳ್ಳಿಯ ವ್ಯಕ್ತಿ ಎಂದು ತಿಳಿಸಿರುತ್ತಾರೆ. ಸದರಿ ಮಹಜರ್ ನ್ನು ಸಂಜೆ 5 ಗಂಟೆಯಿಂದ 6 ಗಂಟೆಯವರೆಗೂ ಮಾಡಲಾಯಿತು. ನಂತರ ಮಾಲು ಸಮೇತ ಠಾಣೆಗೆ ಹಾಜರಾಗಿ ಚಾಸಾ-8 ರವರಿಗೆ ಪ್ರಕರಣ ದಾಖಲಿಸಲು ನಿರ್ದೇಶನ ಮಾಡಿರುತ್ತೇನೆ.

ಸದರಿ ವಶ ಪಡಿಸಿಕೊಂಡ ಮುದ್ದೆಮಾಲುಗಳನ್ನು ನಾನು ನೋಡಿದರೆ ಗುರುತಿಸುತ್ತೇನೆ.

ಸಾಕ್ಷಿಗೆ ಸದರಿ ಪ್ರಕರಣದ ದಾಳಿ ಪಂಚನಾಮೆಯನ್ನು ತೋರಿಸಲಾಗಿ ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಸದರಿ ಪ್ರಕರಣದ ದೂರಿನ ವರದಿಯನ್ನು ತೋರಿಸಲಾಗಿ ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

ನನಗೆ ಮಾಹಿತಿ ಬಂದಾಗ ಕನಕಪುರದ ಬಳಿ ಯಾವುದೋ ಹಳ್ಳಿಯಲ್ಲಿದ್ದೇನು. ಅದು ಯಾವುದು ಎಂದು ಈಗ ನನಗೆ ನೆನಪಿಲ್ಲ. ನಾನು ಇದ್ದ ಹಳ್ಳಿಯಿಂದ ಘಟನಾ ಸ್ಥಳಕ್ಕೆ ಸುಮಾರು 4 ಕಿ.ಮೀಟರ್

ಅಂತರವಿತ್ತು. ಚಾಸಾ-4 ಮತ್ತು 5 ರವರಿಗೆ ಪಂಚರಾಗಲು ನೊಟೀಸು ಕೊಟ್ಟಿರುವುದಿಲ್ಲ ಮೌಖಿಕವಾಗಿ ಕರೆದಿರುತ್ತೇನೆ. ನಾವು ಘಟನಾ ಸ್ಥಳಕ್ಕೆ ಹೋದಾಗ 4.50 ಗಂಟೆಯಾಗಿರುತ್ತದೆ. ಪಂಚರನ್ನು ನಾವು ಅದೇ ಗ್ರಾಮದಿಂದ ಕರೆದುಕೊಂಡು ಹೋಗಿರುತ್ತೇವೆ. ಪಂಚರು ಇದ್ದ ಸ್ಥಳದಿಂದ ಘಟನಾ ಸ್ಥಳವೂ ಸ್ವಲ್ಪ ದೂರದ ಅಂತರದಲ್ಲಿರುತ್ತದೆ. ಆ ದಿನ ಓಡಿ ಹೋದ ಅಸಾಮಿಯೇ ಈಗ ನ್ಯಾಯಾಲಯದಲ್ಲಿರುವ ಆರೋಪಿಯಾಗಿರುತ್ತಾನೆ. ನಾವು ಹಿಡಿಯಲು ಪ್ರಯತ್ನ ಮಾಡಿದಾಗ ಅವರು ಸಿಗಲಿಲ್ಲ. ನಾವು ಜೀಪಿನಲ್ಲಿ ಹೋದ ಕಾರಣ ಅದೇ ಜೀಪಿನಲ್ಲಿ ಹಿಂಬಾಲಿಸಿಕೊಂಡು ಹಿಡಿಯಬಹುದಿತ್ತು ಎಂದರೆ ಅದು ರಸ್ತೆಯಾಗಿರಲಿಲ್ಲ ಅಲ್ಲಿಗೆ ಜೀಪಿನಲ್ಲಿ ಹೋಗಿ ಹಿಡಿಯಲು ಆಗುವುದಿಲ್ಲ ಎಂದು ನುಡಿಯುತ್ತಾರೆ.

ಆ ದಿನ ಅಸಾಮಿ ಯಾವ ಬಟ್ಟೆ ಹಾಕಿದ್ದ ಎಂದು ನೆನಪಿರುವುದಿಲ್ಲ. ಸದರಿ ಮದ್ಯದ ಪ್ಯಾಕೇಟುಗಳನ್ನು ಅಸಾಮಿಯು ಪ್ಲಾಸ್ಟಿಕ್ ಚೀಲದಲ್ಲಿ ಅಂಗಡಿಯ ಒಳಗೆ ಇಟ್ಟಿದ್ದನು. ಅದು ಚಿಲ್ಲರೆ ಅಂಗಡಿಯಾಗಿದ್ದರಿಂದ ಚಾಕ್ ಲೇಟ್ ಬಿಸ್ಕತ್ ಬೇರೆ ಬೇರೆ ವಸ್ತುಗಳು ಇದ್ದವು. ಸದರಿ ಅಂಗಡಿಯ ವಿಸ್ತೀರ್ಣವನ್ನು ನಾವು ಮಹಜರ್ ನಲ್ಲಿ ನಮೂದಿಸಿರುವುದಿಲ್ಲ.

**ಮರುವಿಚಾರಣೆಃ ಇರುವುದಿಲ್ಲ**

**ಓ ಹೇ ಕೇ ಸರಿ ಇದೆ**

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,**

**ಕನಕಪುರ .**